ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1828/2015

ಚಾಸಾ:3 ಪ್ರಾಸಾ:5

ದಿನಾಂಕ: 01.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ದಿನಕರ ಸಾರಂಗ |
| ತಂದೆಯ ಹೆಸರು | : | ಗೋವಿಂದ ಸಾರಂಗ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 29-03-2015 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ನನ್ನ ಅಣ್ಣನಾದ ಚಾಸಾ-1 ರವರ ಕಂಪೌಂಡ್ ಒಳಗೆ ಆರೋಪಿತರು ಅಕ್ರಮವಾಗಿ ಪ್ರವೇಶಿಸಿ ನಮ್ಮ ತೆಂಗಿನ ಮರವನ್ನು ಬೇರೆಯವರನ್ನು ಹತ್ತಿಸಿ ಕಾಯಿ ತೆಗೆಯಿಸುತ್ತಿದ್ದಾಗ ಚಾಸಾ-1 ರವರು ಪ್ರಶ್ನಿಸಲಾಗಿ 1ನೇ ಆರೋಪಿಯು ಕೊಡಲಿಯಿಂದ ಚಾಸಾ-1ರವರ ಕೈಗಳಿಗೆ ಹೊಡೆದಿರುತ್ತಾರೆ. 2ನೇ ಆರೋಪಿಯು ಕಲ್ಲಿನಿಂದ ಚಾಸಾ-1ರವರಿಗೆ ಹೊಡೆದಿರುತ್ತಾರೆ. 3ನೇ ಆರೋಪಿ ರಾಡು ಮತ್ತು ಬೊಂಡದಿಂದ ಚಾಸಾ-1ರವರ ಮೈಗೆ ಹೊಡೆದಿರುತ್ತಾರೆ. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

ಸಾಕ್ಷಿಯು ಮುಮಾ1 ರಿಂದ 3ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ಮತ್ತು 3ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಜೆ ಎಸ್ ರವರಿಂದ:**

ಆರೋಪಿತರು ನನ್ನ, ಚಾಸಾ-1, 2 ಮತ್ತು 4 ರವರ ವಿರುದ್ದ ಒಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. 1ನೇ ಆರೋಪಿ ಸದ್ರಿ ಪ್ರಕರಣವನ್ನು ನಮ್ಮ ವಿರುದ್ದ ದಾಖಲಿಸಿರುವುದು. ಈ ಹಿನ್ನೆಲೆಯಲ್ಲಿ ಅವರು ಕುಂದಾಪುರ ಸರಕಾರಿ ಆಸ್ಪತ್ರೆಗೆ ದಾಖಲಾಗಿ

ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿ. ಆ ರೀತಿ 1ನೇ ಆರೋಪಿ ನಮ್ಮ ವಿರುದ್ದ ದೂರು ದಾಖಲಿಸಿರುವುದು ತಿಳಿದು ಬಂದ ನಂತರ ಚಾಸಾ-1 ರವರು ಆರೋಪಿತರ ವಿರುದ್ದ ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ಖಾಸಗಿ ವ್ಯಕ್ತಿಗಳ ಬಾಬ್ತು ಸರಕಾರಿ ಇಲಾಖೆಗಳಿಗೆ, ಪೊಲೀಸ್ ಠಾಣೆಗೆ ಅರ್ಜಿ ಬರೆದುಕೊಡುತ್ತೇನೆ ಎಂದರೆ ಸರಿ.

ಸದ್ರಿ ದಿನ ಮೇಲೆ ಹೇಳಿದಂತೆ ಅರ್ಜಿ ಬರೆಯುವ ಕೆಲಸಕ್ಕೆ ಹೋಗದೆ ಇರಲು ಯಾವುದೇ ಕಾರಣವಿಲ್ಲ. ಪ್ರತಿ ದಿನ ಬೆಳಗ್ಗಿನಿಂದ ಸಂಜೆ 5 ಗಂಟೆಯವರೆಗೂ ಸದ್ರಿ ಕೆಲಸ ನಿರ್ವಹಿಸುತ್ತೇನೆ ಎಂದರೆ ಸರಿ. ಗಲಾಟೆಯಾಗುತ್ತಿರುವ ಬಗ್ಗೆ ನನಗೆ ಮಗಳು ಸುಷ್ಮಾ ಕರೆ ಮಾಡಿ ತಿಳಿಸಿರುತ್ತಾಳೆ. ನಾನು ಹೋಗುವಾಗ 7-8 ಜನ ಇದ್ದರು. ನಾನು ಹೋಗುವ ವೇಳೆಗೆ 1ನೇ ಆರೋಪಿಗೆ ಯಾವುದೇ ಪೆಟ್ಟು ಆಗಿರುವುದಿಲ್ಲ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಸಾಕಷ್ಟು ಬೇರೆ ಮನೆಗಳು ಇವೆ ಎಂದರೆ ಸರಿ. ಅಕ್ಕಪಕ್ಕದವರಿಗೆ ನಾನು ಮೇಲೆ ಹೇಳಿದ ಘಟನೆ ತಿಳಿದು ಬಂದಿರಲಿಲ್ಲ.

1ನೇ ಆರೋಪಿಗೆ ಪೆಟ್ಟಾದ ಸ್ಥಳ ಅವರ ಅರ್ಜಿಗೆ ಸಂಬಂಧಿಸಿದ್ದು ಎಂದರೆ ಸರಿ. ಅದರಲ್ಲಿ ಫಲ ಬರುವ ತೆಂಗಿನ ಮರಗಳು ಇವೆ ಎಂದರೆ ಸರಿ. ಸದ್ರಿ ಮರಗಳ ಆರೈಕೆಯನ್ನು ಆರೋಪಿತರೇ ಮಾಡುತ್ತಿದ್ದು ಅದರ ಫಲವನ್ನು ಅವರೇ ಪಡೆಯುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಆಸ್ತಿ ನನ್ನ ಪ್ರಕಾರ ಗಂಗೊಳ್ಳಿಯ ಕಾಮತ್ ರವರ ಆಸ್ತಿಯಾಗಿರುತ್ತದೆ. ಅವರಿಂದ ನಮ್ಮ ಹೆಸರಿಗೆ ಭೂ ನ್ಯಾಯ ಮಂಡಳಿಯ ಆದೇಶವಾಗಿರುತ್ತದೆ. ಆದೇಶದ ಪ್ರತಿಯನ್ನು ಪೊಲೀಸರಿಗೆ ಹಾಜರುಪಡಿಸಿರುತ್ತೇನೆ.

ನಮ್ಮ ನಡುವೆ ಸದ್ರಿ ಆಸ್ತಿಯ ವಿಚಾರದಲ್ಲಿ ಮನಸ್ತಾಪ ಇರುತ್ತದೆ ಎಂದರೆ ಸರಿ. ಆರೋಪಿತರು ಅವರ ಜಾಗದಲ್ಲಿ ಬಿದ್ದಿದ್ದ ತೆಂಗಿನ ಕಾಯಿಯನ್ನು ಹೆಕ್ಕುತ್ತಿದ್ದಾಗ ನಾನು, ಚಾಸಾ-1 ಮತ್ತು 4 ರವರು ಕೊಡಲಿನಿಂದ 1ನೇ ಆರೋಪಿಗೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. 2 ಮತ್ತು 3ನೇ ಆರೋಪಿತರು ಅನಂತರದಲ್ಲಿ ಬಂದಿರುತ್ತಾರೆ ಎಂದರೆ ಸರಿ. 3ನೇ ಆರೋಪಿಯು 1ನೇ ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ.

ನಾನು ಮತ್ತು ಚಾಸಾ-1 ರವರು ಜಾಗದ ವಿಚಾರದ ತಕರಾರಿನಿಂದ ಪರಸ್ಪರ ಒಬ್ಬರ ವಿರುದ್ದ ಮತ್ತೊಬ್ಬರ ವಿರುದ್ದ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು

ಠಾಣೆಯಲ್ಲಿ ನನ್ನ ಹೇಳಿಕೆ ಪಡೆದಿರುತ್ತಾರೆ. ಪೊಲೀಸರ ಬಳಿ 1ನೇ ಆರೋಪಿಗೆ ಗಾಯಗಳು ಆಗಿದ್ದ ಬಗ್ಗೆ ತಿಳಿಸಿಲ್ಲ. ಕೊಡಲಿಯಿಂದ 1ನೇ ಆರೋಪಿಯು ಚಾಸಾ-1 ರವರ 2 ಕೈಗಳಿಗೂ ಹಾಗೂ ತಲೆಗೆ ಹೊಡೆದಿರುತ್ತಾರೆ. ಆತ ಧರಿಸಿದ್ದ ಬಟ್ಟೆಗೆ ರಕ್ತ ತಾಗಿರುತ್ತದೆ. ಸದ್ರಿ ಬಟ್ಟೆಯನ್ನು ಪೊಲೀಸರಿಗೆ ಹಾಜರುಪಡಿಸಿರುತ್ತೇವೆ. ಚಾಸಾ-1ರವರಿಗೆ ಎಷ್ಟು ಗಾಯಗಳಾಗಿತ್ತು ಎಂದು ತಿಳಿದಿಲ್ಲ. ಮುದ್ದೆ ಮಾಲುಗಳನ್ನು ಪೊಲೀಸರಿಗೆ ವಶಕ್ಕೆ ಪಡೆದಿರುತ್ತಾರೆ.

ದಿಃ 02-04-2015ರಂದು ಪೊಲೀಸರಿಗೆ ಸಹಿ ನೀಡಿರುತ್ತೇನೆ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ತಿಳಿದಿದೆ. ಅದರಲ್ಲಿ ಆಸ್ತಿ ತಕರಾರಿನ ವಿಚಾರವಾಗಿ ಬರೆದಿರುತ್ತಾರೆ. ಮೇಲೆ ಹೇಳಿದ ಯಾವುದೇ ಘಟನೆ ಜರುಗಿಲ್ಲ ಎಂದರೆ ಸರಿಯಲ್ಲ. ಸದ್ರಿ ದಿನ ಚಾಸಾ-1 ರವರಿಗೆ ಮೇಲೆ ಹೇಳಿದ ಯಾವುದೇ ಹಲ್ಲೆಯಾಗಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ವಿರುದ್ದ ನಾವೇ ಹಲ್ಲೆ ಮಾಡಿ ಆತನ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮುಮಾ1 ರಿಂದ 3 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**